ಅ) ಕೈಗಾ 3ನೇ ಮತ್ತು 4ನೇ ಘಟಕಕ್ಕೆ ಲೈನ್ ಮಾರ್ಗ ಹೋಗಲು ಯಾವುದೇ ಪ್ರಸ್ತಾವನೆ- ಸರ್ಕಾರದ ಮಟ್ಟದಲ್ಲಿ ಇರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಕೈಗಾ 2ನೇ ಘಟಕಕ್ಕೆ ಸಂಬಂಧಿಸಿದಂತೆ, ವಿದ್ಯುತ್ ಮಾರ್ಗವನ್ನು ಬೇರೆ ಮಾರ್ಗದಲ್ಲಿ ಸಾಗುವ ಸಲುವಾಗಿ ಕರಾವಳಿ ಮೂಲಕ ತೆಗೆದುಕೊಂಡು ಹೋಗುವ ಕುರಿತು ಇರುವ ಸಾಧ್ಯಾಸಾಧ್ಯತೆಗಳ ಬಗ್ಗೆ ಎನ್.ಪಿ.ಸಿ. ಪವರ್ ಗ್ರಿಡ್ ಕಾರ್ಪೋರೇಷನ್ ಅಧಿಕಾರಿಗಳ ಜೊತೆ ಸಭೆ ನಡೆಸಿ ಚರ್ಚಿಸಲಾಗಿದ್ದು, ಕರಾವಳಿ ಮುಖಾಂತರ ಲೈನ್ ಮಾರ್ಗ ತೆಗೆದುಕೊಂಡು ಹೋಗಲು ತಾಂತ್ರಿಕವಾಗಿ ಸಾಧ್ಯವಾಗುವುದಿಲ್ಲವೆಂದು ಅಭಿಪ್ರಾಯ ವ್ಯಕ್ತವಾಗಿರುತ್ತದೆ.

ಉ) ಮೇಲೆ (ಈ) ಭಾಗದಲ್ಲಿ ವಿವರಿಸಿದಂತೆ ಈ ಬಗ್ಗೆ ದೀರ್ಘವಾಗಿ ಚರ್ಚೆ ಮಾಡಲಾಗಿದೆ.

ರಾಜ್ಯದ ಹೋಟೆಲ್ ಕಾರ್ಮಿಕರಿಗೆ ಕನಿಷ್ಠ ವೇತನ ಜಾರಿ.

2298(3113) ಶ್ರೀ ಯೋಗೀಶ್ ಭಟ್ ಎನ್. (ಮಂಗಳೂರು) :— ಮಾನ್ಯ ಕಾರ್ಮಿಕ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದ ಹೋಟೆಲ್ ನೌಕರರ ಕನಿಷ್ಠ ವೇತನವನ್ನು ಪರಿಷ್ಕರಿಸಲು ಹಾಗೂ ಸೌಲಭ್ಯವನ್ನು ಹೆಚ್ಚಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? ವೇತನ ಪರಿಷ್ಕರಣ ವಿಳಂಬವಾಗಿರಲು ಕಾರಣ ಏನು?

ಆ) ರಾಜ್ಯದ ಅಸಂಘಟಿತ ನೌಕರರಿಗೆ ಕನಿಷ್ಠ ವೇತನ ಹಾಗೂ ಇತರ ಸೌಲಭ್ಯ ಒದಗಿಸುವಂತೆ ಮಾಡಲು ಸರ್ಕಾರದ ಯೋಜನೆಗಳೇನು?

ಶ್ರೀ ಎ.ಎಂ. ಹಿಂಡಸಗೇರಿ (ಕಾರ್ಮಿಕ ಮತ್ತು ವಕ್ಫ್ ಸಚಿವರು) :—

ಅ) ಹೋಟೆಲ್ ಉದ್ದಿಮೆಗೆ ಕನಿಷ್ಠ ವೇತನವನ್ನು ಪರಿಷ್ಕರಿಸುವ ಸಲುವಾಗಿ ದಿ: 8-3-2001 ರಂದು ಕರಡು ಪ್ರಸ್ತಾವನೆಯನ್ನು ಹೊರಡಿಸಿದೆ. ಹೋಟೆಲ್ ಉದ್ದಿಮೆಗೆ ಕನಿಷ್ಠ ವೇತನ ಪರಿಷ್ಕರಿಸಿ ದಿ: 9-2-1994ರಂದು ಅಧಿಸೂಚನೆಯನ್ನು ಹೊರಡಿಸಿದೆ. ಅದನ್ನು ಆಕ್ಷೇಪಿಸಿ ಕಾರ್ಮಿಕ ಸಂಘದವರು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದರು. ಸದರಿ ರಿಟ್ ಅರ್ಜಿ ವಜಾ ಮಾಡಲಾಯಿತು. ಆ ಆದೇಶದ ವಿರುದ್ಧ ಬೆಂಗಳೂರು ಜಿಲ್ಲಾ ಹೋಟೆಲ್ ಕಾರ್ಮಿಕರ ಸಂಘದವರು ದಿನಾಂಕ: 17-7-2000

ರಂದು ರಿಟ್ ಅಫೀಲು ಸಲ್ಲಿಸಿದ್ದರು. ಸದರಿ ರಿಟ್ ಅಫೀಲ್ ದಿ: 7-11-2000ರಂದು ಇತ್ಯರ್ಥವಾಗಿದೆ. ಕಾನೂನು ಪ್ರಕಾರ 5 ವರ್ಷಕ್ಕೊಮ್ಮೆ ಕನಿಷ್ಠ ವೇತನವನ್ನು ಪರಿಷ್ಕರಿಸಬೇಕಾಗುತ್ತದೆ. ಅಂದರೆ ಈ ಉದ್ದಿಮೆಗೆ 1999ರಲ್ಲಿ ಕನಿಷ್ಠ ವೇತನವನ್ನು ಪರಿಷ್ಕರಿಸಬೇಕಾಗಿತ್ತು. ಆದ್ದರಿಂದ ರಿಟ್ ಅಫೀಲು ಇತ್ಯರ್ಥವಾದಕೂಡಲೇ ಸೂಕ್ತ ಕ್ರಮ ತೆಗೆದುಕೊಂಡು ದಿ: 8-3-2001ರಂದು ಕರಡು ಅಧಿಸೂಚನೆಯನ್ನು ಹೊರಡಿಸಲಾಗಿದೆ.

ಆ) ರಾಜ್ಯದ ಅಸಂಘಟಿತ ನೌಕರರು ದುಡಿಯುತ್ತಿರುವ ಉದ್ದಿಮೆಗಳನ್ನು ಗುರ್ತಿಸಿ 67 ಉದ್ದಿಮೆಗಳನ್ನು ಕನಿಷ್ಠ ವೇತನ ಕಾಯ್ದೆಯ ಅನುಸೂಚಿಗೆ ಸೇರಿಸಿ 58 ಉದ್ದಿಮೆಗಳಿಗೆ ಕನಿಷ್ಠ ವೇತನ ನಿಗಧಿಪಡಿಸಲು ಕ್ರಮಕ್ಕೆಗೊಳ್ಳಲಾಗುತ್ತಿದೆ. ಅಲ್ಲದೆ ಅಸಂಘಟಿತ ಕಾರ್ಮಿಕರಿಗಾಗಿ ಸರ್ಕಾರ ಅಶಾಕಿರಣ ಯೋಜನೆಯನ್ನು ಜಾರಿಗೆ ತಂದಿದೆ. ಈ ಯೋಜನೆಯಡಿಯಲ್ಲಿ ಅಪಘಾತಕ್ಕೆ ಈಡಾಗುವ ಅಸಂಘಟಿತ ಕಾರ್ಮಿಕರಿಗೆ ರೂ. 1,500ರಿಂದ 4,000 ರವರೆಗೆ ಪರಿಹಾರ ಧನವನ್ನು ನೀಡಲಾಗುವುದು. ಇತರ ಕಾರ್ಮಿಕ ಕಾನೂನುಗಳನುಸಾರ ಲಭ್ಯವಿರುವ ಸೌಲಭ್ಯಗಳನ್ನು ಅಸಂಘಟಿತ ಕಾರ್ಮಿಕರಿಗೆ ಸಿಗುವಂತೆ ಕ್ರಮ ಕೈಗೊಳ್ಳಲಾಗುತ್ತದೆ.

ರಾಜ್ಯದಲ್ಲಿ ಸಮಗ್ರ ಕ್ರೀಡಾನೀತಿ ಜಾರಿಗೆ ತರುವುದರ ಬಗ್ಗೆ.

2299(3114) ಶ್ರೀ ಯೋಗೀಶ್ ಭಟ್ ಎನ್. (ಮಂಗಳೂರು) :— ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯ ಮಟ್ಟದಲ್ಲಿ ಸಮಗ್ರ ಕ್ರೀಡಾ ನೀತಿ ತರಲು ಸರಕಾರ ಯೋಜಿಸಿದೆಯೇ?

ಆ) ಹಾಗಿದ್ದಲ್ಲಿ ಯಾವಾಗ ಈ ಯೋಜನೆಯನ್ನು ಅನುಷ್ಠಾನಕ್ಕೆ ತರಲಾಗುತ್ತದೆ?

ಇ) ಕ್ರೀಡಾಪಟುಗಳಿಗೆ ಶೇ. 15 ಕೃಪಾಂಕ ಹಾಗೂ ಕ್ರೀಡಾ ಸ್ಪರ್ಧೆಗಳು ನಡೆಯುವ ಸಂದರ್ಭದಲ್ಲಿ ಉಚಿತ ವಸತಿ ಆಹಾರ ಸೌಲಭ್ಯ ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳಬಹುದೇ?

ಈ) ಆಂಧ್ರ ಸರ್ಕಾರದ ಮಾದರಿಯಲ್ಲಿ ಅಧ್ಯಯನ ಮಾಡುವ ರಾಷ್ಟ್ರೀಯ ಮಟ್ಟದ ಕ್ರೀಡಾಪಟುಗಳಿಗೆ ಶೇ. 5 ಹಾಗೂ ನೇಮಕಾತಿಯಲ್ಲಿ ಶೇ. 2ರಷ್ಟು ಸೀಟು ಕೊಡಲು ಸರ್ಕಾರ ಬಯಸುವುದೇ?

ಶ್ರೀ ಎಸ್.ಎಸ್. ಮಲ್ಲಿಕಾರ್ಜುನ (ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು) :—

ಅ) ಹೌದು.

ಆ) ಕರಡು ಕ್ರೀಡಾ ನೀತಿ ಪರಿಶೀಲನೆಯಲ್ಲಿದೆ.